ಅಧ್ಯಕ್ಷರು.—ಚೀಫ್ ಮಿನಿಸ್ಟರ್ ಕೌನ್ಸಿಲ್‌ನಲ್ಲಿ ಇದ್ದಾರೆ, ಅವರು ಬಂದ ಕೂಡಲೇ ಉತ್ತರ ಕೊಡಿಸುತ್ತೇನೆ.

ಶ್ರೀ ಎಸ್. ಆರ್, ಬೊಮ್ಮಾಯಿ.—ಮಾನ್ಯ ಸದಸ್ಯರಾದ ಅಡ್ಯಂತಾಯ್‌ರವರಿಗೆ ಈ ದಿವಸ ಹೇಳಿಕೆಯನ್ನು ಕೊಡುತ್ತೇನೆ ಎಂದು ಹೇಳಿದ್ದೆ. ದುರ್ದೈವದಿಂದ ಈ ಭೊರೂಕಾ ಮಿಲ್ ಏನು ಇದೆ, ಅಲ್ಲಿ ದುರ್ಘಟನೆ ನಡೆದು...

ಅಧ್ಯಕ್ಷರು.—ಸನ್ಮಾನ್ಯ ಬೊಮ್ಮಾಯಿಯವರೇ, ಅದು ಕಾಲಿಂಗ್ ಅಟೆನ್‌ಷನ್ನೋ, ಅಥವಾ ೩೩ಳಿರ ನಿಯಮವೋ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಇದು ೩೩ಳಿ ವೇಲೆ ಹೇಳುತ್ತಿರುವುದು.

ಶ್ರೀ ಎನ್. ಎಂ. ಅಡ್ಯಂತಾಯ.—ನಾನು ಅವತ್ತು ಕೊಟ್ಟಿದ್ದು ಕಾಲಿಂಗ್ ಅಟೆನ್‌ಷನ್. ೩೩ಳಿ ಅಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಾಲಿಂಗ್ ಅಟೆನ್‌ಷನ್ ಆದರೆ ಲಿಖಿತವಾಗಿ ಉತ್ತರ ಕೊಟ್ಟಿಲ್ಲ. ನನ್ನ ಹತ್ತಿರ ಕಾಪಿ ಇಲ್ಲ, ನಾಳೆ ಕೊಡುತ್ತೇನೆ.

IV ಗೈರು ಹಾಜರಾಗಲು ಅನುಮತಿ

ಶ್ರೀ ಎಂ. ವೀರಪ್ಪ ಮೊಯಿಲಿರವರು ಸದನಕ್ಕೆ ಗೈರು ಹಾಜರಾಗಲು ಅನುಮತಿ ನೀಡುವ ಬಗ್ಗೆ.

ಅಧ್ಯಕ್ಷರು.—ಈಗ ಒಂದು ಪ್ರಕಟಣೆ ಇದೆ.

"ವಿಧಾನ ಸಭಾ ಸದಸ್ಯರಾದ ಶ್ರೀ ಎಂ. ವೀರಪ್ಪ ಮೊಯಿಲಿಯವರು ದಿನಾಂಕ ೧೧-೩-೧೯೮೭ ರಿಂದ ೨೩-೩-೧೯೮೭ ರವರೆಗೆ ಸದರಿ ವಿಧಾನ ಸಭಾ ಉಪವೇಶನಗಳಿಗೆ ಗೈರು ಹಾಜರಾಗಲು ಅನುಮತಿಯನ್ನು ಕೋರಿ ಪತ್ರ ಬರೆದಿರುತ್ತಾರೆ."

"ಶ್ರೀ ಎಂ. ವೀರಪ್ಪ ಮೊಯಿಲಿಯವರಿಗೆ ಮೇಲೆ ಸೂಚಿಸಿದ ಅವಧಿಯಲ್ಲಿ ವಿಧಾನ ಸಭೆಯ ಉಪವೇಶನಗಳಿಗೆ ಗೈರುಹಾಜರಾಗುವುದಕ್ಕೆ ಅನುಮತಿ ಕೊಡಬೇಕೆಂದು ಸದನವು ಅಪೇಕ್ಷಿಸುತ್ತದೆಯೇ" ?

(ಮಾನ್ಯ ಸದಸ್ಯರು ಯಾರೂ ವಿರೋಧ ವ್ಯಕ್ತಪಡಿಸಲಿಲ್ಲ.)

ಅಧ್ಯಕ್ಷರು.—ಗೈರುಹಾಜರಾಗಲು ಶ್ರೀ ಎಂ. ವೀರಪ್ಪಮೊಯಿಲಿಯವರಿಗೆ ಅನುಮತಿ ನೀಡಲಾಗಿದೆ. ಈಗ ಬೇಡಿಕೆಯ ಮುಂದಿನ.

V ವಿತ್ತೀಯ ಕಾರ್ಯ ಕಲಾಪಗಳು.

೧೯೮೭-೮೮ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ ಮತ್ತು ಮಂಜೂರಾತಿ ಅಭಿಯಾಚನೆ ಕ್ರಮಾಂಕ ೨೩ - ರಾಜ್ಯದ ಅಬಕಾರಿ.

ಶ್ರೀ ಹೆಚ್.ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬಕಾರಿ ಮಂತ್ರಿಗಳು):—

ಮಾನ್ಯ ಅಧ್ಯಕ್ಷರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯದ ಅಬಕಾರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೫,೨೬,೯೬,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು